**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 734/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.09**

**ದಿನಾಂಕಃ 18.02.2026** **ಸಿಡಬ್ಲ್ಯೂ.16**

| | |
|---|---|
| ಹೆಸರು | ಸತೀಶ ಕುಮಾರ ಯು |
| ತಂದೆ ಹೆಸರು | ಉಮೇಶಪ್ಪ |
| ವಯಸ್ಸು | 43 ವರ್ಷ |
| ಉದ್ಯೋಗ | ಪಿ ಐ |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ 12.01.2021 ರಿಂದ 30.07.2023 ರವರೆಗೆ ಸಿ ಪಿ ಐ ಆಗಿ ಹರಿಹರ ವೃತ್ತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 16.06.2023 ರಂದು ಚಾಸಾ.15 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿ ಘಟನೆಗೆ ಸಂಬಂದಪಟ್ಟ ವಾಹನಗಳಾದ ಕೆಎ 17 ಇ ವೈ 4594 ಗೆ ಇನ್ಸುರೆನ್ಸ ಇಲ್ಲದ ಕಾರಣ ಪಿ ಎಫ್ ನಲ್ಲಿ ನೋಂದಾಯಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ.7 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ.10 ರವರಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ಈಗಾಲಗಲೇ ನಿಪಿ.13 ಎಂದು ಸಾಕ್ಷಿಯ ಸಹಿಯನ್ನು ನಿಪಿ. 13 (ಬಿ) ಎಂದು ಗುರುತಿಸಲಾಯಿತು. ಅದೇ ದಿನ ಮೃತ ಬಸವರಾಜಪ್ಪನವರ ಶವಪರೀಕ್ಷೆ ವರದಿಯನ್ನು ಚಾಸಾ.11 ರವರಿಂದ ಪಡೆದಿರುತ್ತೇನೆ. ಸಾಕ್ಷಿಯು ಗುರುತಿಸಿದ ವರದಿಯನ್ನು ನಿಪಿ.19 ಎಂದು ಸಾಕ್ಷಿಯ ಸಹಿಯನ್ನು ನಿಪಿ. 19 (ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.6 ರವರಿಗೆ ಮೋಟಾರ ವಾಹನ ಕಾಯ್ದೆ 133 ರಡಿ ನೋಟಿಸ ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.20 ಎಂದು ಸಾಕ್ಷಿಯ ಸಹಿಯನ್ನು ನಿಪಿ. 20 (ಎ) ಎಂದು ಗುರುತಿಸಲಾಯಿತು. ಅದೇ ದಿನ ಸದರಿ ಮಹೇಶ ರವರು ನೋಟಿಸಗೆ ಉತ್ತರ ನೀಡಿರುತ್ತಾರೆ. ಸಾಕ್ಷಿಯು ಗುರುತಿಸಿದ ಉತ್ತರವನ್ನು ನಿಪಿ.21 ಎಂದು ಸಾಕ್ಷಿಯ ಸಹಿಯನ್ನು ನಿಪಿ. 21 (ಎ) ಎಂದು ಗುರುತಿಸಲಾಯಿತು. ಸದರಿಯವರು ವಿಮೆ ಹಾಗೂ ಡಿ ಎಲ್ ಹೊಂದಿಲ್ಲದ ವಾದ್ದರಿಂದ

ಅವರಿಂದ ದಂಡ ಪಾವತಿ ಮಾಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿದ ರಶೀದಿಯ ದೃಡೀಕೃತ ನಕಲನ್ನು ನಿಪಿ.22 ಎಂದು ಸಾಕ್ಷಿಯ ಸಹಿಯನ್ನು ನಿಪಿ. 22 (ಎ) ಎಂದು ಗುರುತಿಸಲಾಯಿತು. ಇನೊಂದು ಬೈಕ ಕೆಎ ಇ ಪಿ 5759 ಟಿವಿಎಸ್ ಬೈಕನ್ನು ಮೃತನ ಹೆಂಡತಿ ರೇಣುಕಮ್ಮನವರ ಇಂಡಿಮಿನಿಟಿ ಬಾಂಡ ಪಡೆದು ಬೈಕನ್ನು ಬಿಡುಗಡೆ ಮಾಡಿರುತ್ತೇನೆ ಸಾಕ್ಷಿಯು ಗುರುತಿಸಿದ ಬಾಂಡನ್ನು ನಿಪಿ.23 ಎಂದು ಸಾಕ್ಷಿಯ ಸಹಿಯನ್ನು ನಿಪಿ. 23 (ಎ) ಎಂದು ಗುರುತಿಸಲಾಯಿತು.

ದಿಃ 17.06.2023 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಪಿ ವಕೀಲರಿಂದಃ**

ತನಿಖಾ ಕಾಲಕ್ಕೆ ನಾನು ಆರೋಪಿತರಿಂದ ಹೇಳಿಕೆ ಪಡೆದಿಲ್ಲ. ಹೇಳಿಕೆ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಹಿಂದಿನ ತನಿಖಾಧಿಕಾರಿಗಳು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ತನಿಖಾಧಿಕಾರಿಗಳು ಆರೋಪಿತರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಘಟನೆ ಬಗ್ಗೆ ಮತ್ತೊಂದು ಬಾರಿ ವಿಚಾರಣೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ತನಿಖಾಧಿಕಾರಿಗಳು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ.6 ರವರು ಯಾವುದೇ ಚಾಲನಾ ಪರವಾನಿಗೆ ಹಾಗೂ ವಿಮೆ ಹೊಂದದೇ ಇದ್ದುದರಿಂದ ಮೃತನ ಕುಟುಂಬಕ್ಕೆ ಸಹಾಯ ಮಾಡುವ ಉದೇಶದಿಂದ ಆರೋಪಿ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ